**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ರಾಜ್ಯದ ಉಪ ಕಾರಾಗೃಹಗಳಾದ ಯಾದಗಿರಿ, ಗದಗ ಹಾಗೂ ವಿಶೇಷ ಉಪಕಾರಾಗೃಹವಾದ ದಾವಣಗೆರೆಯನ್ನು ಜಿಲ್ಲಾ ಕಾರಾಗೃಹಗಳೆಂದು ಪರಿವರ್ತಿಸಿ ಘೋಷಿಸುವ ಕುರಿತು.

**ಓದಲಾಗಿದೆ:** ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರವರ ಪತ್ರ ಸಂಖ್ಯೆ:ಇ4/ಸಿಆರ್-07/2017-18, ದಿನಾಂಕ: 05.05.2017.

*****

ಪ್ರಸ್ತಾವನೆ:-

ಮೇಲೆ ಓದಲಾದ ಪತ್ರದಲ್ಲಿ, ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರವರು ರಾಜ್ಯದ ಉಪ ಕಾರಾಗೃಹಗಳಾದ ಯಾದಗಿರಿ, ಗದಗ ಹಾಗೂ ವಿಶೇಷ ಉಪಕಾರಾಗೃಹವಾದ ದಾವಣಗೆರೆ ಕಾರಾಗೃಹಗಳಲ್ಲಿ ಹೆಚ್ಚಿನ ಸಂಖ್ಯೆಯ ಬಂದಿಗಳು ದಾಖಲಾಗುತ್ತಿದ್ದಾರೆಂದು ಮತ್ತು ಸಿಬ್ಬಂದಿಗಳ ಪ್ರಮಾಣವು ಹೆಚ್ಚಾಗಿದೆಯೆಂದು ತಿಳಿಸಿರುತ್ತಾರೆ. ಅಲ್ಲದೆ, ಕಾರಾಗೃಹಗಳ ಕೈಪಿಡಿ ನಿಯಮ 1978 ಉಪನಿಯಮ 6(2)(i)ರ ಪ್ರಕಾರ ಕಾರಾಗೃಹಗಳಲ್ಲಿ ಸಾದಾ ಶಿಕ್ಷೆಗೊಳಪಟ್ಟ ಬಂದಿಗಳನ್ನು ಗರಿಷ್ಠ 3 ತಿಂಗಳವರೆಗೆ ಬಂಧಿಸಿಡುವ ಅವಕಾಶ ಮಾತ್ರ ಇದ್ದು, ಜಿಲ್ಲಾ ಕಾರಾಗೃಹಗಳನ್ನಾಗಿ ಪರಿವರ್ತಿಸಿದ್ದಲ್ಲಿ ಗರಿಷ್ಠ 6 ತಿಂಗಳವರೆಗೆ ಬಂಧಿಸಿಡುವ ಅವಕಾಶವಿರುತ್ತದೆ. ಆದ್ದರಿಂದ, ಉಪ ಕಾರಾಗೃಹಗಳಾದ ಯಾದಗಿರಿ ಮತ್ತು ಗದಗ ಹಾಗೂ ವಿಶೇಷ ಉಪಕಾರಾಗೃಹವಾದ ದಾವಣಗೆರೆಯನ್ನು ಜಿಲ್ಲಾ ಕಾರಾಗೃಹಗಳನ್ನಾಗಿ ಪರಿವರ್ತಿಸಿದಲ್ಲಿ, ಈಗಾಗಲೇ ಕಾರಾಗೃಹದ ಅಧೀಕ್ಷಕರಾಗಿ ಸಹಾಯಕ ಅಧೀಕ್ಷಕರೇ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿ ಅಧಿಕಾರಿಯು ಅದೇ ಹುದ್ದೆಯಲ್ಲಿ ಮುಂದುವರೆಯುವುದರಿಂದ, ಸರ್ಕಾರಕ್ಕೆ ಹುದ್ದೆಯ ಸೃಜನೆಯ ಆರ್ಥಿಕ ಹೊರೆ ಉಂಟಾಗುವುದಿಲ್ಲ. ಆದುದರಿಂದ ಮೇಲ್ಕಂಡ 03 ಉಪ / ವಿಶೇಷ ಕಾರಾಗೃಹಗಳನ್ನು ಜಿಲ್ಲಾ ಕಾರಾಗೃಹಗಳನ್ನಾಗಿ ಪರಿವರ್ತಿಸಿ, ಆದೇಶ ಹೊರಡಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 101 ಪಿಆರ್‌ಎ 2017,**
**ಬೆಂಗಳೂರು, ದಿನಾಂಕ: 12/06/2017**

ರಾಜ್ಯದ ಉಪ ಕಾರಾಗೃಹಗಳಾದ ಯಾದಗಿರಿ ಮತ್ತು ಗದಗ ಹಾಗೂ ವಿಶೇಷ ಉಪಕಾರಾಗೃಹವಾದ ದಾವಣಗೆರೆಯನ್ನು **ಜಿಲ್ಲಾ ಕಾರಾಗೃಹಗಳನ್ನಾಗಿ** ಪರಿವರ್ತಿಸಿ, ಸರ್ಕಾರವು ಘೋಷಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

M.R. Shobha

**(ಎಂ.ಆರ್. ಶೋಭಾ)**
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಒಳಾಡಳಿತ ಇಲಾಖೆ (ಸೆರಮನೆ ಮತ್ತು ಸಿನಿಮಾ)

ಕಾರಾಗೃಹಗಳ ಮಹಾನಿರೀಕ್ಷಕರ ಕಛೇರಿ — ಆಗಮನ ಶಾಖೆ — ಕ್ರಮ ಸಂ. 192 — ದಿನಾಂಕ 13/06 — INSPECTOR GENERAL OF PRISONS IN KARNATAKA

**ಇವರಿಗೆ:**

1) ಮಹಾಲೇಖಪಾಲರು (ಜಿ&ಎಸ್‌ಎಸ್‌ಎ, ಇ&ಆರ್‌ಎಸ್‌ಎ), ಕರ್ನಾಟಕ, ಬೆಂಗಳೂರು.
2) ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರವರ ಕಛೇರಿ ಶೇಷಾದ್ರಿ ರಸ್ತೆ, ಬೆಂಗಳೂರು.
3) ಸಹಾಯಕ ಅಧೀಕ್ಷಕರು, ಯಾದಗಿರಿ / ಗದಗ / ದಾವಣಗೆರೆ.

**ಪ್ರತಿ:**

1) ಮಾನ್ಯ ಗೃಹ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಿಸಿಎಎಸ್), ಒಳಾಡಳಿತ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
3) ಸರ್ಕಾರದ ಉಪ ಕಾರ್ಯದರ್ಶಿಗಳು (ಕಾನೂನು ಮತ್ತು ಸುವ್ಯವಸ್ಥೆ), ಒಳಾಡಳಿತ ಇಲಾಖೆ.
4) ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಸಮನ್ವಯ).
6) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.